KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 31/12

## ಶಿವಸೇನೆ ಪುಂಡಾಟಿಕೆ, ಗಡಿ ತಂಟೆ ವಿಷಯದಲ್ಲಿ ಜಾಣ ನಡೆ ಅನುಸರಿಸಲು ಸಂಪುಟ ನಿರ್ಧಾರ

# ಮಹಾ ತರಲೆ ನಿಭಾಯಿಸಲು ಎಚ್ಚರಿಕೆ ಹೆಜ್ಜೆ

ವಿಕ ಸುದ್ದಿಲೋಕ ಬೆಂಗಳೂರು

ನೆರೆಯ ಮಹಾರಾಷ್ಟ್ರ ಸರಕಾರ ಗಡಿ ವಿವಾದವನ್ನು ಮತ್ತೆ ಕೆದಕಿದ್ದು, ಕನ್ನಡ ವಿರೋಧಿ ಧೋರಣೆಯೊಂದಿಗೆ ಶಿವಸೇನೆ ಪುಂಡಾಟಿಕೆಗೆ ಇಳಿದಿರುವ ಬಗ್ಗೆ ಸಂಪುಟ ಸಭೆಯಲ್ಲಿ ಸೋಮವಾರ ಚರ್ಚೆ ನಡೆಯಿತು. ಅನಗತ್ಯ ವಿವಾದಕ್ಕೆ ಆಸ್ಪದ ಕೊಡದೆ ನೆರೆ ರಾಜ್ಯದ ತಂಟೆಯನ್ನು ಸೂಕ್ಷ್ಮತೆಯಿಂದ ನಿಭಾಯಿಸಲು ಸಂಪುಟ ಬಯಸಿದೆ.

ನೆರೆಯ ಮಹಾರಾಷ್ಟ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದ ಕಳೆದ 5 ವರ್ಷಗಳ ಅವಧಿಯಲ್ಲಿ ಗಡಿ ವಿಚಾರದಲ್ಲಿ ಯಾವುದೇ ತಂಟೆ, ತಕರಾರು ಇರಲಿಲ್ಲ. ಆದರೆ, ಶಿವಸೇನೆ ನೇತೃತ್ವದ ಮೈತ್ರಿಕೂಟದ ಸರಕಾರ ಅಧಿಕಾರ ಹಿಡಿಯುತ್ತಿದ್ದಂತೆ ಗಡಿ ತಕರಾರು, ಭಾಷಾ ವೈಷಮ್ಯ ಎದುರಾಗಿದೆ. ಇಂತಹ ಸ್ಥಿತಿಯಲ್ಲಿ ಸಚಿವರು ಏನೋ ಹೇಳಿಕೆ ಕೊಟ್ಟು ಅನಗತ್ಯ ವಿವಾದ ಮೈಮೇಲೆ ಎಳೆದುಕೊಳ್ಳುವುದು ಬೇಡ ಎಂದು ಸಿಎಂ ಬಿಎಸ್‌ವೈ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಶಿವಸೇನೆ ಪುಂಡಾಟಿಕೆಗೆ ಪ್ರತಿಕ್ರಿಯೆ ನೀಡುವ ಬದಲು, ಮಹಾರಾಷ್ಟ್ರದಲ್ಲಿ ಶಿವಸೇನೆ ನೇತೃತ್ವದ ಮೈತ್ರಿ ಸರಕಾರದ ಭಾಗವಾಗಿರುವ ಕಾಂಗ್ರೆಸ್ ಮತ್ತು ಎನ್‌ಸಿಪಿಯತ್ತ ನಾವು ಬೆರಳು ತೋರಿಸುವ ಬದಲು ಬೆಳವಣಿಗೆಯನ್ನು ತಿರುಗಿಸಬಹುದು. ರಾಜ್ಯದ ಕಾಂಗ್ರೆಸ್ ನಿಲುವು ಏನೆಂಬುದನ್ನು ಸ್ಪಷ್ಟಪಡಿಸುವಂತೆ ಒತ್ತಡ ತರಬೇಕು ಎಂದು ಸಂಪುಟ ಸಭೆ ಬಯಸಿತು ಎನ್ನಲಾಗಿದೆ.

## ಒಂದಿಂಚೂ ಬಿಟ್ಟುಕೊಡಲ್ಲ ಎಂದು ಸಿಎಂ ಸ್ಪಷ್ಟೋಕ್ತಿ

''ಮಹಾರಾಷ್ಟ್ರ-ಕರ್ನಾಟಕ ಗಡಿ ವಿಚಾರದಲ್ಲಿ ಮಹಾಜನ್ ವರದಿಯೇ ಅಂತಿಮ. ರಾಜ್ಯದ ಈ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲ. ಕರ್ನಾಟಕದ ಒಂದಿಂಚು ಜಾಗವನ್ನೂ ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ''



ಎಂದು ಸಿಎಂ ಬಿಎಸ್‌ವೈ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ''ಗಡಿ ವಿಚಾರದಲ್ಲಿ ಶಿವಸೇನೆ ಅನಗತ್ಯ ಗೊಂದಲ ಸೃಷ್ಟಿಸುವ ಕೆಲಸ ಮಾಡಿದೆ. ಇದಕ್ಕೆ ಸರಿಯಾದ ಉತ್ತರ ಕೊಡುತ್ತೇವೆ. ಯಾರೋ ಏನೋ ಹೇಳಿದರು ಕನ್ನಡಿಗರು ಆತಂಕಕ್ಕೆ ಒಳಗಾಗಬಾರದು. ಶಾಂತಿ ಕಾಪಾಡಬೇಕು'' ಎಂದು ಮನವಿ ಮಾಡಿದರು. ''ನೆರೆ ರಾಜ್ಯದ ಕೆಲವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅನಗತ್ಯವಾಗಿ ಗಡಿ ವಿವಾದ ಕೆದಕುತ್ತಾರೆ. ಇದಕ್ಕೆಲ್ಲ ಸೊಪ್ಪು ಹಾಕುವುದಿಲ್ಲ'' ಎಂದು ಸ್ಪಷ್ಟನೆ ನೀಡಿದರು. '' ಮಹಾಜನ್ ಆಯೋಗದ ವರದಿಯಂತೆ ಕರ್ನಾಟಕಕ್ಕೆ ಯಾವ ಭಾಗಗಳು ಸೇರ್ಪಡೆಯಾಗಬೇಕಿತ್ತೋ ಅವುಗಳು ಸೇರಿಯಾಗಿದೆ. ಅದೇ ರೀತಿ ಮಹಾರಾಷ್ಟ್ರಕ್ಕೂ ಕೂಡ ನ್ಯಾಯ ಸಿಕ್ಕಿದೆ'' ಎಂದರು.

### [illegible]

**ಬೆಂಗಳೂರು:** ಫೆಬ್ರವರಿ 17ರಿಂದ 21ರ ವರೆಗೆ ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ನಡೆಯಲಿದೆ. ಜತೆಗೆ ಮಾರ್ಚ್ 5ರಂದು ಹಣಕಾಸು ಖಾತೆ ಹೊಂದಿರುವ ಸಿಎಂ ಯಡಿಯೂರಪ್ಪ ಅವರು 2020-2021ನೇ ವಿತ್ತ ವರ್ಷದ ಬಜೆಟ್ ಮಂಡಿಸಲಿದ್ದಾರೆ. ''ಈ ಮೊದಲು ಜನವರಿ 20ರಿಂದ 30ರ ವರೆಗೆ ಜಂಟಿ ಅಧಿವೇಶನ ನಡೆಸಲು ನಿರ್ಧರಿಸಲಾಗಿತ್ತು. ಇದರಲ್ಲಿ ಬದಲಾವಣೆ ಮಾಡಿ ಫೆಬ್ರವರಿ 17ರಿಂದ 21ರ ವರೆಗೆ ಜಂಟಿ ಅಧಿವೇಶನ ನಡೆಸುವ ತೀರ್ಮಾನ ಕೈಗೊಳ್ಳಲಾಗಿದೆ. ಫೆ.17ರಂದು ರಾಜ್ಯಪಾಲರು ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ,'' ಎಂದು ಸಚಿವ ಜೆ.ಸಿ.ಮಾಧು ಸ್ವಾಮಿ ತಿಳಿಸಿದರು. ''ಮಾರ್ಚ್ 2ರಂದು ಬಜೆಟ್ ಅಧಿವೇಶನ ಪ್ರಾರಂಭಗೊಳ್ಳಲಿದೆ. ಮಾರ್ಚ್ 5ರಂದು ಆಯವ್ಯಯ ಮಂಡನೆಯಾಗಲಿದೆ,'' ಎಂದರು.



ಮಹಾರಾಷ್ಟ್ರದ ಕೆಲವು ರಾಜಕೀಯ ನಾಯಕರು ಗಡಿ ವಿವಾದ ಕೆದಕಿ ಜನರ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಸಿಎಂ ಪ್ರತಿಕೃತಿ ದಹನ, ಕನ್ನಡ ಬಾವುಟ ಸುಡುವುದು ಯಾರಿಗೂ ಶೋಭೆ ತರುವುದಿಲ್ಲ. ಜನರನ್ನು ಅನಗತ್ಯವಾಗಿ ಪ್ರಚೋದನೆ ಮಾಡಬಾರದು. ಮಹಾರಾಷ್ಟ್ರ ಕಾನೂನು ಹೋರಾಟ ನಡೆಸಿದರೆ, ರಾಜ್ಯವೂ ಸಿದ್ಧವಿದೆ.

**-ಜಗದೀಶ ಶೆಟ್ಟರ್** ಸಚಿವ

### ನವೆಂಬರ್‌ನಲ್ಲಿ ಜಿಮ್

**2020ರ ನವೆಂಬರ್ 3 ರಿಂದ 5ರ ವರೆಗೆ ವಿಶ್ವ ಬಂಡವಾಳ ಹೂಡಿಕೆಯಾರರ ಸಮಾವೇಶ ನಡೆಸಲು ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.**

### ನೈಟ್ ಶಿಫ್ಟ್ ಮಹಿಳೆಯರಿಗೆ ರಕ್ಷಣೆ

ವಾಣಿಜ್ಯ ಮಳಿಗೆಗಳಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ರಕ್ಷಣೆ ಒದಗಿಸುವ ಕಾಯಿದೆಗೆ ತಿದ್ದುಪಡಿ ತರಲಾಗುವುದು ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

''ಸಂಸ್ಥೆ, ಕಂಪನಿಯವರು ಸುರಕ್ಷತೆ ನೀಡಬೇಕು. ಮನೆಯಿಂದ ಕೆಲಸದ ಸ್ಥಳ, ಕೆಲಸದ ಸ್ಥಳದಿಂದ ಮನೆಗೆ ತೆರಳಲು ಕಡ್ಡಾಯವಾಗಿ ವಾಹನದ ವ್ಯವಸ್ಥೆ ಮಾಡಬೇಕು. ಈ ವಾಹನಗಳಿಗೆ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಸಬೇಕು. ಕಂಪನಿಯ ಸೆಕ್ಯೂರಿಟಿ ಗಾರ್ಡ್‌ಗಳೂ ಇರಬೇಕು. ವಾಹನ ಚಾಲಕರ ಸ್ವವಿವರ ಕಂಪನಿ ಬಳಿಯಿರಬೇಕು. ಮಹಿಳಾ ಸಿಬ್ಬಂದಿಗೆ ಕೆಲಸದ ಸ್ಥಳದಲ್ಲಿ ಸೂಕ್ತ ವಿಶ್ರಾಂತಿ ಕೊಠಡಿ, ಶೌಚಾಲಯ ಇರಬೇಕು. ಮಹಿಳಾ ಸಿಬ್ಬಂದಿಯ ಮೊಬೈಲ್ ನಂಬರ್, ಇಮೇಲ್ ವಿಳಾಸವನ್ನು ಬೇರೆಯವರ ಜತೆಗೆ ಹಂಚಿಕೊಳ್ಳಬಾರದು. ಈ ಷರತ್ತುಗಳನ್ನು ಉಲ್ಲಂಘಿಸುವ ಸಂಸ್ಥೆಗಳ ನೋಂದಣಿ ರದ್ದು ಪಡಿಸುವ ಅಂಶವನ್ನು ವಿಧೇಯಕದಲ್ಲಿ ಸೇರಿಸಲಾಗಿದೆ,'' ಎಂದರು.

ಸಾಂದರ್ಭಿಕ ಚಿತ್ರ



### ಲಾ ಸ್ಕೂಲ್‌ನಲ್ಲಿ ಮೀಸಲು

ಪಬ್ಲಿಕ್ ಯುಟಿಲಿಟಿ ಸರ್ವೀಸ್‌ಗೆ ಸಂಬಂಧಿಸಿದ ಕೈಗಾರಿಕೆಗಳ ಪರವಾನಗಿಯನ್ನು 6 ತಿಂಗಳಿಗೊಮ್ಮೆ ನವೀಕರಿಸುವ ಬದಲು 3 ವರ್ಷಕ್ಕೊಮ್ಮೆ ಈ ಪ್ರಕ್ರಿಯೆ ಮಾಡಲು ತೀರ್ಮಾನಿಸಿದ್ದು, ಈ ಸಂಬಂಧ ತಿದ್ದುಪಡಿ ವಿಧೇಯಕ ಮಂಡಿಸಲಾಗುವುದು. ನ್ಯಾಷನಲ್ ಲಾ ಸ್ಕೂಲ್‌ನಲ್ಲಿ ಕರ್ನಾಟಕದಲ್ಲಿ ಕನಿಷ್ಠ 10 ವರ್ಷ ವ್ಯಾಸಂಗ ಮಾಡಿದವರಿಗೆ ಶೇ.25ರಷ್ಟು ಸೀಟು ಮೀಸಲಿಡುವ ಬಗ್ಗೆಯೂ ವಿಧೇಯಕ ಮಂಡಿಸಲಾಗುವುದು.